1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**396/2023**

ಹೆಸರುಃ ನಾಗರಾಜ ಚಾಸಾಃ 1

ತಂದೆಃ ಮುನಿಯಾ ನಾಯಕ್ ಪ್ರಾಸಾ: 1

ವಯಸ್ಸುಃ 38 ವರ್ಷ

ಉದ್ಯೋಗಃ ಬೆಸಾಂ ನಲ್ಲಿ ಸಹಾಯಕ

ವಾಸ ಸ್ಥಳಃ ದೇವರಹಳ್ಳಿ ಚ, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 20-09-2024 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ 30.06.2021 ರಂದು ರಾತ್ರಿ 10.30ರ ಹೊತ್ತಿಗೆ ಕಚೇರಿಯಿಂದ ಕೆಲಸವನ್ನು ಮುಗಿಸಿಕೊಂಡು ಪಲ್ಸರ್ ಬೈಕ್ ನಲ್ಲಿ ದೇವರಹಳ್ಳಿಯಲ್ಲಿರುವ ಮನೆಗೆ ಹೋಗುತ್ತಿರುವಾಗ ಅಗರಬನ್ನಿಹಟ್ಟಿ ಗುಳ್ಳೇಹಳ್ಳಿ ಮದ್ಯದ ಲ್ಲಿರುವ ಹೊಂಡದ ಹತ್ತಿರ ವಾಹನವನ್ನು ತಡೆದು ಚಾಕುವನ್ನು ತೋರಿಸಿ ಹೆದರಿಸಿ ತನ್ನ ಬಳಿ ಇರುವ ವಸ್ತುಗಳನ್ನು ಕೇಳಿರುತ್ತಾರೆ ಆಗ ನನ್ನ ಜೇಬಿನಲ್ಲಿದ್ದ ಮೊಬೈಲ್ ಹಾಗೂ ಕತ್ತಿನಲ್ಲಿದ್ದ ಹೆಡ್ ಫೋನನ್ನು ಆರೋಪಿತರು ಕಿತ್ತುಕೊಂಡಿರುತ್ತಾರೆ. ನಂತರ ನಾನು ಮನೆಗೆ ಹೋಗಿ ಮನೆಯಲ್ಲಿ ನಾನು ಹಾಗು ನನ್ನ ತಾಯಿ ಇಬ್ಬರೇ ಇದ್ದು ಸದರಿ ಸಂಗತಿಯನ್ನು ಅವರಿಗೆ ತಿಳಿಸಿರುವುದಿಲ್ಲ ನಂತರ ದಿಃ 18. 07.2021 ರಂದು ಹೊಸ ಮೊಬೈಲ್ ತೆಗೆದುಕೊಂಡ ನಂತರ ಹೊಸ ಮೊಬೈಲ್ ಏಕೆ ತೆಗೆದುಕೊಂಡೆ ಎಂದು ನನ್ನ ತಾಯಿ ಕೇಳಿದಾಗ , ದೂರನ್ನು ಠಾಣೆಗೆ ಹಾಜರಾಗಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದೂರನ್ನು ನಿಶಾನೆ.ಪಿ.1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು .

ನಂತರ ಅದೇ ದಿನ ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಚಾಸಾ.2 ಮತ್ತು 3ರವರ ಸಮಕ್ಷಮ ಮಹಜರ್ ಜರುಗಿಸಿರುತ್ತಾರೆ. ಸಾಕ್ಷಿಯು ಈಗ ಮಹಜರ್ ನ್ನು ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ನಿಶಾನೆ.ಪಿ.2 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.2 (ಎ) ಎಂದು ಗುರುತಿಸಲಾಯಿತು. ನಿಪಿ.2 ನ್ನು 1.00 ಗಂಟೆಯಿಂದ 2.00 ಗಂಟೆಯವರಗೆ ಜರುಗಿಸಿರುತ್ತಾರೆ. ನಿಪಿ.2ನ್ನು ಜರುಗಿಸುವ ಕಾಲಕ್ಕೆ ಚಾಸಾ.2 ಮತ್ತು 3 ರವರು ನಿಪಿ.2 ಕ್ಕೆ ನನ್ನ ಜೊತೆ ಸಹಿ ಮಾಡಿರುತ್ತಾರೆ.

ಮಹಜರ್ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ . ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ . ಸದರಿ ಭಾವಚಿತ್ರವನ್ನು ನಿಪಿ.3 ಎಂದು ಗುರುತಿಸಲಾಯಿತು .

ಹೊಸ ಮೊಬೈಲ್ ಗೆ ದಿಃ 19.07.2021 ರಂದು ನನ್ನ ಗೊಗಲ್ ಅಕೌಂಟ್ ನಲ್ಲಿ ಆರೋಪಿತರು ಸೆಲ್ಪಿ ತೆಗೆದುಕೊಂಡಿರುವ ಪೋಟೋಗಳು ಕಂಡುಬಂದಿರುತ್ತವೆ. ಸದರಿ ಸಂಗತಿಯನ್ನು ಪೋಲಿಸರಿಗೆ ತಿಳಿಸಿರುತ್ತೇನೆ. ಆರೋಪಿತರನ್ನು ಗುರುತಿಸಲು ನನ್ನನ್ನು ಠಾಣೆಗೆ ಕರೆಯಿಸಿದಾಗ ಇಬ್ಬರು ಆರೋಪಿತರನ್ನು ಹಾಜರುಪಡಿಸಿದ್ದು ಅದರಲ್ಲಿ ಒಬ್ಬರು ಸಾಹಿಲ್ ಎಂದು ನಾನು ಗುರುತಿಸಿರುತ್ತೇನೆ. ಸದರಿ ವಿಚಾರವಾಗಿ ನಾನು ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದಲ್ಲಿ ಹಾಜರಿರುವ 1ನೇ ಆರೋಪಿ ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು 2

ನೇ ಆರೋಪಿಯನ್ನು ಸಾಕ್ಷಿಯು ನೋಡಿರುವುಕದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ಹಾಜರುಪಡಿಸಿರು ಚಾಕುವನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಮು.ಮಾ.ಸಂಖ್ಯೆ.1 ಎಂದು ಗುರುತಿಸಲಾಯಿತು. ನ್ಯಾಯಾಲಯದಿಂದ ತನ್ನ ಸುಪರ್ದಿಗೆ ಪಡೆದ ಮೊಬೈಲ್ ಹಾಗೂ ಹೆಡ್ ಫೋನ ನ್ನು ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿ ಮು.ಮಾ.2 ಮತ್ತು 3 ಎಂದು ಗುರುತಿಸಿ ಸದರಿ ವಸ್ತುಗಳನ್ನು ಚಾಸಾ.1 ರವರಿಗೆ ಹಿಂದಿರುಗಿಸಲಾಗಿರುತ್ತದೆ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ .**

ಕೆಲಸ ಮುಗಿಸಿ ನಾನು ಮನೆಗೆ ಹೊರಟಾಗಿ ಸಮಯ ರಾತ್ರಿ 11.00 ಗಂಟೆಯಾಗಿರುತ್ತದೆ. ಆ ಸಮಯದಲ್ಲಿ ಮುಖಗಳು ಕಾಣುತ್ತಿರಲಿಲ್ಲ ಎಂದರೆ ನನ್ನ ವಾಹನದ ಹೆಡ್ ಲೈಟ್ ನ ಬೆಳಕಿನಲ್ಲಿ ಕಂಡುಬಂದಿರುತ್ತದೆ ಎಂದು ನುಡಿಯತ್ತಾರೆ. ಹೆಡ್ ಲೈಟ್ ನ ಬೆಳಕಿನಲ್ಲಿ ಮುಖಚರ್ಯ ಗುರುತಿಸಲು ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿನ ಆರೋಪಿತರು ಧರಿಸಿದ್ದ ಶರ್ಟ ಹಾಗೂ ಪ್ಯಾಂಟ್ ನ ವಿವರಣೆ ನನಗೆ ಗೂತ್ತಿಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿರುವುದು ಎಂದರೆ ಸರಿಯಲ್ಲ. ಪಂಚನಾಮೆಯನ್ನು ದಿಃ 18.07.2021 ರಂದು ಮದ್ಯಾಹ್ನ 1.00 ಯಿಂದ 2.00 ಗಂಟೆಯವರಗೆ ಜರುಗಿಸಿರುತ್ತಾರೆ. ಪಂಚನಾಮೆಯಲ್ಲಿ ಬರೆದಿರುವ ಸಂಗತಿಯನ್ನು ಪೋಲಿಸರು ಓದಿ ತಿಳಿಸಿರುತ್ತಾರೆ. ಪಂಚನಾಮೆ ನಡೆದ ಸ್ಥಳದ ಚೆಕ್ಕು ಬಂದಿ ಪೂರ್ವಕ್ಕೆ ಗಳ್ಳೆಹಳ್ಳಿಗೆ ಹೋಗುವ ರಸ್ತೆ , ಪಶ್ಚಿಮಕ್ಕೆ ಅಗರಬನ್ನಿಹಟ್ಟಿ ರಸ್ತೆ , ಉತ್ತರಕ್ಕೆ ಹೊಲ ಮತ್ತು ಮನೆ , ದಕ್ಷಿಣಕ್ಕೆ ಹೊಲ ಇದೆ.

ನಿಪಿ.2 ರಲ್ಲಿ ಕಾಣುತ್ತಿರುವ ಸಹಿಯನ್ನು ನಾನು ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿ. ಮು.ಮಾ.1 ರಲ್ಲಿರುವ ಚಾಕು ಸಾಮಾನ್ಯವಾಗಿ ಎಲ್ಲರ

ಮನೆಗಳಲ್ಲಿ ಇರುತ್ತವೆ ಎಂದರೆ ಸರಿ. ಸದರಿ ವಸ್ತುವನ್ನು ನಾನು ಪೋಲೀಸರಿಗೆ ತಂದು ನೀಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆಯ ದಿನ ಯಾವ ರೀತಿಯ ಚಾಕುವಿನಿಂದ ಆರೋಪಿತರು ಹೆದರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿಃ 30.06.2021 ರಂದು ನನ್ನ ಮೊಬೈಲ್ ನ್ನು ಕಿತ್ತುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಸುಮಾರು 20 ದಿನಗಳ ನಂತರ ನಾನು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 18 ದಿನಗಳು ಎಂದು ನುಡಿಯುತ್ತಾರೆ.

ಆರೋಪಿತರು ಬೇರೆಯವರ ಬಳಿ ನನ್ನ ಬಳಿ ಕಸಿದುಕೊಂಡ ಹೋದ ಮೊಬೈಲ್ ನನ್ನು ಪಡೆದಿದ್ದು ಆರೋಪಿತರಿಗೂ ಹಾಗೂ ಸದರಿ ಮೊಬೈಲ್ ಗೂ ಯಾವುದೇ ಸದಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಪೋಲಿಸರು ಸೇರಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಪೋ.ಠಾ. ಗೆ ಮೂರು ಬಾರಿ ಹೋಗಿರುತ್ತೇನೆ. ದಿಃ 18.07.2021 ರಂದು ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಜವಾದ ಆರೋಪಿತರನ್ನು ಬಿಟ್ಟು ಪ್ರಕರಣಕ್ಕೂ ಹಾಗೂ ಮು.ಮಾ. ಯಾವುದೇ ಸಂಬಂಧ ಇಲ್ಲದ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**